IJFANS INTERNATIONAL JOURNAL OF FOOD AND NUTRITIONAL SCIENCES

ISSN PRINT 2319 1775 Online 2320 7876

*Research paper* © 2012 IJFANS. All Rights Reserved, UGC CARE Listed ( Group -I) Journal Volume 10, Iss 1, 2021

# ವೈಚಾರಿಕ ಸಾಹಿತ್ಯದಲ್ಲಿ ಜಾತಿ ಪರಿಣಾಮ

ಡಾ.ನಾಗರೆಡ್ಡಪ್ಪ ಹೆಚ್

ಕನ್ನಡ ಉಪನ್ಯಾಸಕರು

**ಸರಾಂಶ**

ಕನ್ನಡ ವೈಚಾರಿಕ ಸಾಹಿತ್ಯವು ಹಲವು ನೆಲೆಗಳಲ್ಲಿ ಬೆಳೆದುಬಂದಿದೆ. ಇದಕ್ಕೊಂದು ದೊಡ್ಡ ಚರಿತ್ರೆಯೇ ಇದೆ. ವೈಚಾರಿಕ ಸಾಹಿತ್ಯಕ್ಕೆ ಸಾಮಾಜಿಕ ವಾಸ್ತವ ಮತ್ತು ಅಲ್ಲಿನ ಸಂಕೀರ್ಣತೆಗಳೇ ಮೂಲ ಪ್ರೇರಣೆಗಳಾಗಿವೆ. ಸಾಮಾಜಿಕ ಬದುಕನಲ್ಲಿ ಕಂಡುಬರುವ ಜಾತಿ, ಧರ್ಮ, ಅಸ್ಪೃಶ್ಯತೆ, ಲಿಂಗ, ವರ್ಗ ಇತ್ಯಾದಿಗಳಲ್ಲಿ ಕಂಡುಬರುವ ಅಸಮಾನತೆ, ವೈರುಧ್ಯಗಳ ಚರ್ಚೆಗಳು ವೈಚಾರಿಕ ಸಾಹಿತ್ಯದಲ್ಲಿ ಕಂಡುಬರುವ ಪ್ರಮುಖ ಅಂಶಗಳಾಗಿವೆ. ಜಗತ್ತಿನ ಎಲ್ಲ ದೇಶಗಳಲ್ಲಿ ಭಾವುಕತೆಯು ಭಗವಂತನನ್ನು ರೂಪಿಸಿದೆ. ಭಗವಂತನ ಮೂಲಕ ನಡೆಯುವ ಆಳ್ವಿಕೆಯು ಪಾಶ್ಚಾತ್ಯ ಜಗತ್ತಿನಲ್ಲಿ ಧರ್ಮ ರೂಪ ಪಡೆದುಕೊಂಡಿದೆ. ಇದು ಮಾನವರೆಲ್ಲರನ್ನು ಸಾಮಾಜಿಕ ಜೀವನಕ್ಕೆ ತಂದು ಮಾನವ ಸಮಾಜವಾಗಿ ಪರಿವರ್ತಿಸಿತು. ಆ ದೇಶಗಳಲ್ಲಿ ಉಳ್ಳವರು ಮತ್ತು ಇಲ್ಲದವರು ಎಂಬ ವರ್ಗ ವಿಭಜನೆಯಿದ್ದರೂ ಶ್ರಮಿಕ ವರ್ಗದಲ್ಲಿ ಜಾತಿ ವಿಭಜನೆಯಿಲ್ಲ. ಆ ಧರ್ಮದಲ್ಲಿ ಪ್ರಜಾಪ್ರಭುತ್ವ ಮೌಲ್ಯಗಳು ಮಾನವ ಸಂಬಂಧಗಳನ್ನು ಸಾಮಾಜಿಕ ಸಮಾನತೆಯ ಹಿನ್ನಲೆಯ ಮೇಲೆ ನಡೆಸಿದೆ. ಶ್ರಮಿಕ ವರ್ಗ ಒಗ್ಗಟ್ಟಾಗಿ ಸಂಘಟಿತವಾಗಿದೆ. ಆದ್ದರಿಂದ ಅಲ್ಲಿ ಗುಲಾಮ ದಂಗೆ, ರೈತ ದಂಗೆ, ರೈತ ಹೋರಾಟ ಹೆಚ್ಚಾಗಿ ನಡೆದವು. ಆದರೆ ಭಾರತದಲ್ಲಿ ಇದು ಭಿನ್ನತೆಯಿಂದ ಕೂಡಿದೆ. ಇಲ್ಲಿನ ಪುರೋಹಿತಶಾಹಿ ವ್ಯವಸ್ಥೆ ಶ್ರಮಿಕ ವರ್ಗದ ನಡುವೆ ಒಗ್ಗಟ್ಟಿಲ್ಲದಂತೆ ಮಾಡಿದೆ. ಧರ್ಮಪರವಾಗಿ ಸಾಮಾಜಿಕ ಜೀವನ ಸಾಧ್ಯವಾಗದೆ ಒಂದೇ ಧರ್ಮದ ಕೆಲವರನ್ನು ಅಂಟು, ಮುಟ್ಟು, ನಿಷ್ಠೆಯ ಹೆಸರಿನಲ್ಲಿ ದೂರ ಮಾಡಿ ಅವರ ಮೇಲೆ ಆಧಿಪತ್ಯದ ಹಿಡಿತವನ್ನು ಪಡೆಯಿತು.

ಪ್ರಮುಖ ಪದಗಳು : ಜಾತಿ ಮತ್ತು ಮೀಸಲಾತಿ, ಜಾತಿ ಮತ್ತು ಧರ್ಮ, ಜಾತಿ ಮತ್ತು ಮತಾಂತರ ಹಾಗೂ ಜಾತಿ ಮತ್ತು ಅಂತರ್ಜಾತಿ ವಿವಾಹ

**ಪ್ರಸ್ತಾವನೆ**

ಅಸಮಾನತೆ ಎನ್ನುವುದು ಭಾರತೀಯ ನೆಲಕ್ಕೆ, ಸಾಂಪ್ರದಾಯಿಕ ಚಿಂತನೆಯ ಮನಸ್ಸುಗಳಿಗೆ ಒಂದು ಮಹಾಶಾಪವೇ ಆದಂತಿದೆ. ಇದು ಮೂಲನಿವಾಸಿಗಳ ಚಾರಿತ್ರಿಕ

ISSN PRINT 2319 1775 Online 2320 7876
Research paper © 2012 IJFANS. All Rights Reserved, UGC CARE Listed ( Group -I) Journal Volume 10, Iss 1, 2021

ಸತ್ಯ. ಸಾಂಸ್ಕೃತಿಕ ಇತಿಹಾಸ ಏನೇ ಆಗಿದ್ದರೂ ಎಷ್ಟೇ ವೈಜ್ಞಾನಿಕವಾಗಿದ್ದರೂ ಇದು ಸರಿ, ಇದು ತಪ್ಪು ಎನ್ನುವ ವಿಶ್ಲೇಷಣೆಗಳು ತುಂಬಾ ಸಹಜವೆನ್ನುವಂತೆ ಸಾಧ್ಯವಾಗುತ ತಲಿದ್ದರೂ ಜಾತಿ-ಧರ್ಮದಂತಹ ಸಂಗತಿಗಳು ದಿನೇ ದಿನೇ ಒಗಟಾಗಿ ಸಂಕೀರ್ಣಗೊಳ್ಳುತ್ತಿವೆ. ನಾಗರಿಕತೆ ಎನ್ನುವುದನ್ನು ಹೀಗೆ ನಿಜಕ್ಕೂ ಬೇಕಾದ ಕಡೆಗಳಲ್ಲಿ ಬಳಸಿಕೊಳ್ಳಲಾಗದಂತಹ ವಿಪರ್ಯಾಸಗಳಿಗೆ ದಾರಿ ಮಾಡಲಾಗುತ್ತಿದೆ.

ಮಾನವೀಯತೆಯ ಬಗೆಗೆ ಬೇರೆಲ್ಲೂ ಇರಲಾರದಷ್ಟು ನಮ್ಮಲ್ಲಿ ಮಾತುಗಳು ಚರ್ಚೆಗಳಿವೆ. ವಿಚಿತ್ರವಾದ ಸಾಕಷ್ಟು ಉಪದೇಶಗಳೂ ಇವೆ. ಸರ್ವರಿಗೂ ಸುಖವಾಗಲಿ ಎಂಬ ಆದರ್ಶದ ಸ್ವರೂಪದ ಹಲವು ಮಾತುಗಳಿವೆ. ದೇವನೊಬ್ಬ ನಾಮ ಹಲವು, ಎಲ್ಲರಲ್ಲೂ ಭಗವಂತನಿದ್ದಾನೆ ಎಂಬೆಲ್ಲಾ ಅನಂತತೆಯ ಶಬ್ದಗಳು ವಾಕ್ಯಗಳಿವೆ. ಈ ಪ್ರಕೃತಿಯಲ್ಲಿ ಎಲ್ಲರೂ ಸಮಾನರೆ ಎನ್ನುವ ವಾದಗಳಿಗೂ ಇಲ್ಲಿ ಬರಗಾಲವಿಲ್ಲ. ಇವೆಲ್ಲವೂ ಸಾಮಾನ್ಯ ಸಂದರ್ಭಕ್ಕೆ ಬಹಳ ರೋಮಾಂಚನಗೊಳಿಸಬಲ್ಲ ಅದ್ಭುತವಾದ ಮಾತುಗಳೇ ಹೊರತು ಇವುಗಳನ್ನು ಕೇಳಿ ಕಲ್ಪಿಸಿಕೊಂಡು ಸುಖ ಪಡುವಷ್ಟರಲ್ಲೇ ಒಡೆದು ಹೋಗಿಬಿಡುತ್ತವೆ.

ಸಮಾಜ ಎನ್ನುವುದು, ಆ ಕಾರಣಕ್ಕೆ ಸಾಮಾಜಿಕ ಜೀವನ ಎನ್ನುವುದು ನಮ್ಮೊಳಗಿನ ಬದುಕಿನ ಬದ್ಧತೆಯ ಸಂಗತಿ ಎಂದುಕೊಳ್ಳುತ್ತಿರುವಲ್ಲಿಯೇ ಎದುರಿಗಿರುವ ಸತ್ಯ ಬೇರೆಯದ್ದೇ ಆಗಿದೆ. ಸಾಮಾಜಿಕ ಅಸಮಾನತೆ, ಸಾಮಾಜಿಕ ಅನ್ಯಾಯಗಳು ಸಾರ್ವತ್ರಿಕ ಕ್ರಮವಾಗಿವೆ. ಇದನ್ನು ನಿಜದ ನೆಲೆಗಳೆಂದು ಅರಗಿಸಿಕೊಂಡು, ಅವುಗಳಿಗೆ ಒಗ್ಗಿಕೊಂಡಂತೆ ಬದುಕುವುದು ಇತ್ತೀಚಿನ ಅನಿವಾರ್ಯತೆಯೂ ಆಗಿರುವುದು ಸ್ಪಷ್ಟ. 'ಭಾರತೀಯ ಸಮಾಜ' ಎಂದ ಕೂಡಲೇ 'ಜಾತಿವ್ಯವಸ್ಥೆ' ಇದರ ಮುಖ್ಯ ಲಕ್ಷಣ ಎನ್ನುವಂತೆ ಅರ್ಥ ಮಾಡಿಕೊಂಡೇ ಮುಂದುವರಿಯಬೇಕಿರುವ ಸಂಕಟ ಸಾಮಾನ್ಯವಲ್ಲ. ಸಹಜ ಸಮಾನತೆಯ ಆಶಯ ಮತ್ತು ಪ್ರೀತಿಯಿಂದ ಹೊರಟವರಿಗೆಲ್ಲಾ ಇದೊಂದು ನಿಜದ ಆತಂಕವೇ ಆಗಿದೆ.

'ಮಾನವೀಯತೆ' ಎನ್ನುವ ಪದದ ಮೂಲವೇ 'ಅಸಮಾನತೆ'ಯನ್ನು ಮೀರುವಂತಹುದು, ಅಂತಃಕರಣದೊಂದಿಗಿನ ಭಾವವೇ ಇದರ ಶಕ್ತಿ ಸಮಾನತೆ ಎನ್ನುವುದು ಇಲ್ಲಿ ಸರಳವಾಗುವ ಆಶಯ. ಇದು ಹುಟ್ಟು-ಬದುಕು-ಸಾವು ಎನ್ನುವ ಸಾಮಾನ್ಯ ಅರಿವನ್ನು ಯಾವುದೇ ಸಹಜ ರೀತಿಯ ತರ್ಕಗಳಿಂದ ಆ ಬಗೆಯ ವಾದಗಳಿಂದ ಗಮನಿಸಿದರೂ, ನಿಸರ್ಗ ಎಲ್ಲರನ್ನು ಸಮಾನ ನೆಲೆಯಲ್ಲಿಯೇ ಗಮನಿಸಿರುವುದುಂಟು. ಅದಕ್ಕೆ ವಿರುದ್ಧವಾಗಿ ಮನುಷ್ಯ ತನ್ನ ಸಣ್ಣತನ, ಪಿತೂರಿ, ಸ್ವಾರ್ಥ, ಒಳಸಂಚು, ಮೊದಲಾದ ಭಾವದಾರಿದ್ರ್ಯಯ ಗುಣದಿಂದ ಹಲವು ನೆಲೆಯಲ್ಲಿ

ISSN PRINT 2319 1775 Online 2320 7876

Research paper © 2012 IJFANS. All Rights Reserved, UGC CARE Listed ( Group -I) Journal Volume 10, Iss 1, 2021

ಅಸಮಾನತೆಯನ್ನೇ ಪುಷ್ಟಿಗೊಳಿಸುವ ಹಾದಿಯನ್ನೇ ಮಹಾಮಾರ್ಗವಾಗಿಸಿಕೊಂಡಿರುವುದು ಇಷ್ಟೆಲ್ಲಾ ಯೋಜಿತ ನೆಲೆಯಾದಾಗ್ಯೂ ಮತ್ತಷ್ಟು ಗಟ್ಟಿಗೊಳಿಸಿಕೊಳ್ಳುವ ನಿಟ್ಟಿನಲ್ಲಿ ಇದನ್ನು ಧಾರ್ಮಿಕ ಚೌಕಟ್ಟಿಗೆ ಆಳವಡಿಸಿ ಧರ್ಮಸೂಕ್ಷ್ಮಂ್ಮದಂತೆ ಮಾಡುವಲ್ಲಿಯೇ ಒಂದು ದೊಡ್ಡ ತಂತ್ರವಿದೆ. ಇದೊಂದು ಎಲ್ಲ ಮಾನವೀಯ ಭಾವಗಳಿಗೂ ಮುಸುಕು ಹಾಕಿದ ಭಾವವೇ ಹೌದು. ಎಂತಹದ್ದೇ ವೈಜ್ಞಾನಿಕ ಚಿಂತನೆಯ ಎಚ್ಚರದ ಕಾಲದಲ್ಲಿದ್ದು ಈ ಬಗೆಯ ನಿಲುವಿನಿಂದ ಪಾರಾಗಲಾರದ ವಿಪರ್ಯಾಸವೇ ಈ ವ್ಯವಸ್ಥಿತ ತಂತ್ರದ ಗಾಢತೆಯನ್ನು ಹೇಳುವಂತಹುದು. ಭಾರತದಂತಹ ನೆಲದಲ್ಲಿ ಈ ಕುತಂತ್ರವನ್ನು ಒಂದು ದೈವಿಕ ಭಾವನೆಯ ರೂಪಕವನ್ನಾಗಿ ಅದಕ್ಕೊಂದು ಸನಾತನೆಯ ಮೌಲ್ಯವನ್ನು ಆರೋಪಿಸಿದ್ದು, ವರ್ಣಾಶ್ರಮವನ್ನೇ ಸತ್ಯವೆಂದು ವಾದಿಸಿದ್ದು ಈ ಕ್ಷಣಕ್ಕೂ ದೊಡ್ಡ ತೊಡಕಾಗಿರುವುದನ್ನು ಯಾವ ಆಧಾರದಿಂದ ಅಲ್ಲಗಳೆಯಲಾದೀತು? ಅಂದಿನ ದಿನದಿಂದ ಇಂದಿನವರೆಗೂ ಈ ಸಮಾಜ ಹೀಗೊಂದು ಅಸಮಾನತೆಯ ಅಂಶವನ್ನು ತನ್ನ ಒಡಲೊಳಗೆ ಇರಿಸಿಕೊಂಡು, ಅದನ್ನೇ ಸಾಧಿಸುತ್ತಿರುವುದಾದರೆ, ಆ ಬಗೆಗೆ ಅವಮಾನದಿಂದ ತಲೆ ತಗ್ಗಿಸಲೇಬೇಕು. ರೂಪ, ಆಕಾರವೇ ಇಲ್ಲದ ಈ ತೆರನಾದ ಸಮಾಜವನ್ನು ಒಪ್ಪಿಕೊಂಡು ಬದುಕಬೇಕಾದ ವಿಪರ್ಯಾಸ ಯಾಕೆ ಮತ್ತು ಯಾರಿಗಾಗಿ ಎಂದರೆ ಸರಿ ಉತ ್ತರ ಕೊಡಬಹುದಾದವರು ಯಾರು? ಹೀಗೊಂದು ಸಾಮಾಜಿಕ ನಂಬಿಕೆ ಮಹಾ ಸಮಸ್ಯೆಯಾಗಿ ಮನುಷ್ಯ-ಮನುಷ್ಯರ ನಡುವೆ ಉಂಟುಮಾಡಿರುವ ತಾರತಮ್ಯವನ್ನು ಇನ್ನೂ ಸರಿಪಡಿಸಲಿಕ್ಕಾದ ಒದ್ದಾಟಗಳಿಗೆ ಕರ್ಮಗಳಿಗೆ ಯಾರು ಹೊಣೆ? 'ಮೇಲು' ಎನ್ನುವ ಅಹಂಕಾರಗಳಿಗೆ', 'ಕೀಳು' ಎನ್ನುವ ಅವಮಾನಗಳಿಗೆ ಕಾಲ ಉತ್ತರ ನೀಡಬಹುದೆ? ಇಂತಹ ಆಲೋಚನೆಯ ಅಡಿಯಲ್ಲಿ ತೊಡಗಿದೆ.

## ಜಾತಿಯ ಪರಿಣಾಮದ ನೆಲೆಗಳು ಅಸಮಾನತೆಯ ನೆಲೆಗಳು

ಬರಗೂರು ರಾಮಚಂದ್ರಪ್ಪರವರ 'ಗುಪ್ತಗುಲಾಮಗಿರಿ' ಲೇಖನದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ವಿಶ್ಲೇಷಿಸುತ್ತ, ಬಂಡವಾಳಶಾಹಿ ಮತ್ತು ಅದಕ್ಕೆ ಪೂರಕವಾಗುವ ಪುರೋಹಿತಶಾಹಿಗಳಿಂದ ಕೂಡಿದ ಶೋಷಕ ಶಕ್ತಿಯೇ ಇಂದಿನ ಉಚ್ಛವರ್ಗ. ಈ ವರ್ಗ ಬಡವರನ್ನು ಭದ್ರವಾಗಿ ಹಿಡಿದುಕೊಂಡಿದೆ. ಈ ಹಿಡಿತವನ್ನು 'ಭಾರತೀಯ ಪ್ರಜಾಪ್ರಭುತ್ವ' ಇಲ್ಲಿಯವರೆಗೆ ತಪ್ಪಿಸಲಾಗಲಿಲ್ಲ. ಇಂಥ ಬಿಗಿ ಮುಷ್ಟಿಯಿಂದ ಮುಕ್ತವಾಗಿಸಿ ಯಾವುದು ಸ್ವಾತಂತ್ರ್ಯಂ್ಯನು¨s Àವ ತಂದುಕೊಂಡಬೇಕಾಗಿತ್ತೋ ಅಂಥಾ ಪ್ರಜಾಪ್ರಭುತ್ವದ ಹೆಸರಿನಲ್ಲೇ ಬಡಸಮುದಾಯ 'ಗುಪ್ತಗುಲಾಮಗಿರಿ'ಗೆ ಒಳಗಾಗಿದೆ. ಈ ಸಮುದಾಯ ತನ್ನ ಗುಲಾಮಗಿರಿಯ 'ಸೂಕ್ಷಮ ಪದರಗಳನ್ನು ಅರ್ಥ ಮಾಡಿಕೊಳ್ಳದಂತೆ

ISSN PRINT 2319 1775 Online 2320 7876

*Research paper* **© 2012 IJFANS. All Rights Reserved, UGC CARE Listed ( Group -I) Journal Volume 10, Iss 1, 2021**

ಪ್ರತಿಗಾಮಿ ವ್ಯವಸ್ಥೆ ಸರಾಗವಾಗಿ ಕೆಲಸ ಮಾಡುತ್ತ ಬಂದಿದೆ'(ಬರಗೂರು ರಾಮಚಂದ್ರಪ್ಪ,) ಎಂದು ಅಭಿಪ್ರಾಯಪಡುತ್ತಾರೆ.

ಹೀಗೆ ಶ್ರಮಿಕರ ಶ್ರಮವನ್ನು ಸ್ವಾರ್ಥಕ್ಕೆ ಬಳಸಿಕೊಳ್ಳುವ ಯಾವುದೇ ವ್ಯಕ್ತಿ ಸಂಸ್ಥೆ, ವ್ಯವಸ್ಥೆಗಳ ಬಗೆಗೆ ಬರಗೂರು ರಾಮಚಂದ್ರಪ್ಪ ಆಕ್ರೋಶ ವ್ಯಕ್ತಪಡಿಸುತ್ತಾರೆ. ಅವರ ಸಾಹಿತ್ಯ ಚಿಂತನೆಗಳುದ್ದಕ್ಕೂ ಈ ಶ್ರಮಿಕ ಪರವಾದ ನೆಲೆ ಮತ್ತು ದೌರ್ಜನ್ಯದ ವಿರೋಧದ ಆಶಯವನ್ನು ಗುರುತಿಸಬಹುದು.

ಅಸ್ಪೃಶ್ಯ ಅಥವಾ ಕೆಳಜಾತಿಯ ಮಹಿಳೆಯ ಬಗೆಗಿನ ಅಧ್ಯಯನದ ಮಾದರಿಗಳನ್ನು ನಾವು ಸ್ಪಷ್ಟಗೊಳಿಸುವಲ್ಲಿ ಎದುರಾಗುವ ಆತಂಕಗಳಿಗೆ ಮೊಗಳ್ಳಿ ಗಣೇಶ್ ಅವರ ಅಭಿಪ್ರಾಯವನ್ನು ಉದಾಹರಣೆಯಾಗಿ ತೆಗೆದುಕೊಳ್ಳುವುದಾದರೆ ಅಸ್ಪೃಶ್ಯ ಮಹಿಳೆಯನ್ನು ಗ್ರಹಿಸಿಕೊಳ್ಳುವಲ್ಲಿ ನಾವು ಇಟ್ಟುಕೊಳ್ಳಬೇಕಾದ ಮಾನದಂಡಗಳೇ ಬೇರೆ ಇರುತ್ತವೆ. ಈ ವಿಚಾರ ಖಚಿತತೆಗಾಗಿ ಮೊಗಳ್ಳಿ ಗಣೇಶ್ ಅವರ ಅಭಿಪ್ರಾಯ ಉಲ್ಲೇಖಾರ್ಹವೆನಿಸಿದೆ. ಭಾರತೀಯ ಮಹಿಳೆ ಎನ್ನುವುದೇ ಅಮೂರ್ತವಾದ ಅಲೌಕಿಕ ಕಲ್ಪನೆ. ಹೇಗೆ ಭಾರತೀಯರೆಲ್ಲ ಒಂದೇ ಎಂದು ಹೇಳಲು ಬರುವುದಿಲ್ಲವೋ ಅಂತೆಯೇ ಎಲ್ಲ ಜಾತಿಯ ಮಹಿಳೆಯರು ಒಂದೇ ಆಗಿರುವುದಿಲ್ಲ. ಮಹಿಳಾ ಸಮಾಜವು ಜಾತಿಯ ಶ್ರೇಣಿಯಲ್ಲೇ ವಿಕಾಸವಾಗಿದೆ. ಧರ್ಮ ಇಲ್ಲೆಲ್ಲ ತನ್ನ ಅವತಾರಗಳನ್ನು ಎತ್ತಿದ್ದ ಆಯಾಕಾಲದ ರೂಪ-ವಿರೂಪಗಳನ್ನು ಬಲಪಡಿಸಿದೆ. ಹೀಗಾಗಿ ಮಹಿಳೆಯ ಸ್ಥಿತಿ ಕೂಡ ಪಲ್ಲಟವಾಗುತಲೇ ತನ್ನ ಸೀಮಿತ ವ್ಯಾಪ್ತಿಯ ಒಳಗೆ ಪರ್ಯಾಯಗಳನ್ನು ಹುಡುಕುವಂತಾಗಿದೆ. "ಕೆಳಜಾತಿಯ ಮಹಿಳೆಯ ಲೋಕ ವಾಸ್ತವದಲ್ಲಿ ಅತ್ಯಂತ ಕಿರಿದಾದುದು. ಅದರ ಭಾವನಾತ್ಮಕ ಲಹರಿಗಳಲ್ಲಿ ಆಚರಣೆಯ ಸವಭಾವದಲ್ಲಿ ಕೆಳಜಾತಿಯ ಮಹಿಳೆಯು ವಿಶ ್ವಸತ್ತಾತ್ಮಕವಾದ ನಂಬಿಕೆಗಳನ್ನು ಕಟ್ಟಿಕೊಂಡಿದ್ದಾಳೆ. ಆದರೆ ಅವರವರ ಮೇಲಿನ ಶೋಷಣೆಯ ಸ್ವರೂಪ, ಪ ್ರಮಾಣಗಳ ದಾರಿಯಲ್ಲಿ ಅವರ ಅಭಿವ್ಯಕ್ತಿ ಮತ್ತು ಅಸ್ತಿತ್ವ ಬೇರೆಯಾಗಿರುತ್ತವೆ."( ಶೈಲಾ ಎಚ್.ಎಲ್.) ಹೀಗೆ ಅಸ್ಪೃಶ್ಯ ಮಹಿಳೆ ಮತ್ತು ಸ್ಪೃಶ್ಯ ಮಹಿಳೆಯರು ಸಮುದಾಯ ಬದುಕಿನ ನಂಬಿಕೆಯ ಚಿತ್ರಣಕ್ಕೂ, ಒಂದೇ ರೂಪ ಇರುವುದಿಲ್ಲ. ಅದು ಅವರವರ ಬದುಕಿನ ಅನುಸರಣೆಯ ಕ್ರಮ ಮತ್ತು ಜಾತಿಯಾಧಾರಿತ ಸಂಬಂಧಗಳ ಹಿನ್ನೆಲೆಯಿಂದ ವೃತ್ತಿ ಒಡನಾಟಗಳಿಗೆ ಸಂಬಂಧಿಸಿದ್ದಾಗಿರುತ್ತದೆ. ಅಸ್ಪೃಶ್ಯ ಮಹಿಳೆಯ ಜೀವನವು ಶೋಷಣೆಯ ವಕ್ರತೆಯಲ್ಲಿ ಹೊರಳಾಡಿದರೆ ಭಾವನಾತ್ಮಕ ಸಂಚಲನ ಮಾತ್ರ ಅವಳಲ್ಲಿ ಯಾವ ಕಾರಣಕ್ಕೂ ಇಂಗದೆ ವೃದ್ಧಿಯಾಗುತ್ತದೆ. ಭಾವನಾಜೀವಿಯಾದ ಅಸ್ಪೃಶ್ಯ ಮಹಿಳೆ ಯಾವ ಸಾಮಾಜಿಕ ಸಂಕೋಲೆಗಳಿಗೆ ಅಳುಕದೇ ತನ್ನ ಅಸ್ತಿತ್ವವನ್ನು ಕಟ್ಟಿಕೊಳ್ಳುತ್ತಾಳೆ. ಇವಳು ತನ್ನೊಂದಿಗೆ ಮಕ್ಕಳು ಹಿರಿಯರು ಎಲ್ಲರನ್ನು ಒಗ್ಗೂಡಿಕೊಂಡು ಬರುವ ನಾಳೆಗಳನ್ನು ಧೈರ್ಯದಿಂದ

ISSN PRINT 2319 1775 Online 2320 7876
*Research paper* © 2012 IJFANS. All Rights Reserved, UGC CARE Listed ( Group -I) Journal Volume 10, Iss 1, 2021

ಎದುರಿಸುತ್ತಾಳೆ. ಯಾವಾಗಲೂ ಆಶಾಭಾವನೆಯಲ್ಲಿ ಆತ್ಮಾವಲೋಕನದಿಂದ ಅಸ್ಪೃಶ್ಯ ಮಹಿಳೆ ತನ್ನ ಇರುವಿಕೆಗೆ ಭದ್ರತೆಯನ್ನು ಕಂಡುಕೊಳ್ಳುವತ್ತ ಯೋಚಿಸುತ್ತಾಳೆ. ಇಂತಹ ಮನಸ್ಥಿತಿಯೇ ಅವಳನ್ನು ಸದೃಢತೆಯಿಂದ ಯಾವಾಗಲೂ ಮುನ್ನುಗ್ಗುವಂತೆ ಮಾಡುತ್ತದೆ.

ನಮ್ಮ ಆದರ್ಶವಾದಿಗಳು, ಮಾನವೀಯತೆಗಳನ್ನು ಯಾರು ಪ್ರತಿಪಾದಿಸಿದರೂ ಸರಿಯೆ, ಉತ್ಸಾಹಿತರಾಗಿ, ಆ ಪ್ರತಿಪಾದಕರ ವ್ಯಕ್ತಿತ್ವಕ್ಕೆ ಮೆರಗು ಕೊಡುತ್ತಾರೆ. ಇವರಿಗೆ ಎದುರು ಕಾಣುವ ಕ್ರಿಯೆ ಮಾತ್ರ ಮುಖ್ಯವಾಗುತ್ತದೆ. ಯಥಾಸ್ಥಿತಿವಾದಿಗಳ ಕೈಯಲ್ಲಿ ಮಾನವೀಯತೆ ಎಂಥ ಪ್ರಬಲ ಅಸ್ತ್ರವಾಗಿದೆ ಎಂಬುದನ್ನು ಎಷ್ಟು ಬೇಗ ಅರಿತರೆ ಅಷ್ಟೂ ಒಳ್ಳೆಯದು. ಈ ಅರಿವು ಒಂದು ಮೌಲ್ಯವನ್ನು ಆಯಾ ಸಾಮಾಜಿಕ ರಾಜಕೀಯ ವ್ಯವಸ್ಥೆಯ ಹಿನ್ನೆಲೆಯಲ್ಲಿ ವಿಶೆಷಣೆಗೆ ಒಳಪಡಿಸುವುದರಿಂದ ಬರಬಹುದು. ಹೀಗೆ ಬರುವುದು ಅತ್ಯಂತ ಅಗತ್ಯ. ಮಾನವ ತನ್ನ ಸಂಗಾತಿಗಳ ನೋವಿಗೆ ಸಹಜವಾಗಿ ಸ್ಪಂದಿಸಬೇಕು, ಶೋಷಿತರನ್ನು ಕರುಣೆಯಿಂದ ಕಾಣಬೇಕು. ಕರುಣೆ ಬದುಕಿನ ಕಣ್ಣಾಗಬೇಕು-ಇಂತಹ ಉದಾತ್ತ ಆಶಯಗಳನ್ನು ಪ್ರಸ್ತುತ ಲೇಖನ ಹೊಂದಿದೆ.

## ಜಾತಿ ಮತ್ತು ಮೀಸಲಾತಿ

ಭಾರತದಲ್ಲಿ ಮೊದಲು ಮೀಸಲಾತಿಯ ವಿರುದ್ಧ ದನಿಯೆತ್ತಿದ ಮತ್ತು ಅದರ ಪರವಾಗಿ ನಿಂತವರು ಛತ್ರಪತಿ ಶಾಹು ಮಹಾರಾಜರು. ಇವರು ಶಿವಾಜಿಯ ವಂಶಸ್ಥರಾಗಿದ್ದರು. ಸ್ವತಃ ಒಬ್ಬ ದಲಿತ ರಾಜನಾದ ಕಾರಣ, ರಾಜನಾದರೂ ಅವರಿಗೆ ಅಂಟಿದ 'ಜಾತಿ'ಯ ಕಾರಣಕ್ಕಾಗಿ ಅವರೂ ಸಹ ಎಷ್ಟೋ ಬಾರಿ ಅವಮಾನಪಡಬೇಕಾಯಿತು. ನಂತರ ತನ್ನ ಅಸ್ಪೃಶ್ಯರ ಉದ್ಧಾರಕ್ಕಾಗಿ ಮೀಸಲಾತಿಯನ್ನು ಜಾರಿಗೆ ತಂದರು. "ಇನ್ನು ಮುಂದೆ ಖಾಲಿಯಾಗುವ ಹುದ್ದೆಗಳಲ್ಲಿ ಶೇಕಡ ೫೦ರಷಟನ್ನು ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು"(ಮಹೇಶನೀಲಕಂಠ ಚೀಳಂಗಿ ಎಫ್.ಬಿ. ವಾಲ್‌ನಿಂದ) ಎಂದು ಆದೇಶಿಸಿದರು. ಇತಿಹಾಸಕ್ಕೆ ಹಿಂತಿರುಗಿ ನೋಡಿದಾಗ ಅದೇ ಬಾಲಗಂಗಾಧರತಿಲಕ್‌ರ "ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು" ಎಂಬೆಲ್ಲಾ ಹೋರಾಟದ ಮಾತುಗಳನ್ನು ಕೇಳಿದ್ದೇವೆಯೇ ಹೊರತು, "ಶಾಹುಮಹಾರಾಜರ" ಕಲ್ಯಾಣ ಸಮಾಜದ ಪರಿಕಲ್ಪನೆಗಳನ್ನು ಮಾತ್ರ ಕಾಣದೇ ಇರುವುದು ಖೇದಕರ ಸಂಗತಿ. ಮೀಸಲಾತಿ ಕುರಿತ ವೈಚಾರಿಕ ಲೇಖನಗಳ ಸಂಶೋಧನೆ ಕೈಗೊಳ್ಳುವ ಮೊದಲು ಮೀಸಲಾತಿ ಎಂದರೇನು? ಭಾರತೀಯ ಸಂದರ್ಭದಲ್ಲಿ ಮೀಸಲಾತಿ ಮತ್ತು ಮೀಸಲಾತಿ ಏಕೆ ಅನಿವಾರ್ಯ ಎಂಬುದನ್ನು ತಿಳಿದರೆ, ಮುಂದೆ ಪ್ರವೇಶಿಕೆ ಪಡೆಯಲು ಸಾಧ್ಯವಾಗುತ್ತದೆ

ISSN PRINT 2319 1775 Online 2320 7876

*Research paper* © 2012 IJFANS. All Rights Reserved, UGC CARE Listed ( Group -I) Journal Volume 10, Iss 1, 2021

## ಜಾತಿ ಮತ್ತು ಧರ್ಮ ಕುರಿತು

ಇಂದು ಸಮಾಜದಲ್ಲಿ ಜಾತಿಯು ಮನುಷ್ಯರನ್ನು ನೀತಿಭ್ರಷ್ಟರನ್ನಾಗಿ ಮಾಡುತ್ತಿದೆ. ನೀತಿ ನಿಯಮಗಳನ್ನು ನಾಶಗೊಳಿಸಿ, ಮನುಷ್ಯರಲ್ಲಿ ಸಂಕುಚಿತ ಮನೋಭಾವ ಬೆಳೆಸುತ್ತಿದೆ. ಒಂದು ಜಾತಿಯ ವ್ಯಕ್ತಿ ಇತರ ಜಾತಿಯ ವ್ಯಕ್ತಿಯ ಕಷ್ಟ-ಸುಖಗಳಲ್ಲಿ ಭಾಗಿಯಾಗಲು ಬಿಡುವುದಿಲ್ಲ. ಬಾಗಿಯಾದರೂ ತಮ್ಮ ಸ್ವಾರ್ಥಕ್ಕೆ ಅನುಗುಣವಾಗಿ ಮಾತ್ರ. ವ್ಯಕ್ತಿಯ ನಿಷೆಠ ಏನಿದ್ದರೂ ಜಾತಿಯವರಿಗೆ ಮಾತ್ರ. ಪ್ರೇರಣೆ-ಪ್ರೋತ್ಸಾಹ, ಹೊಗಳಿಕೆ-ಮೆಚ್ಚಿಕೆ ಏನಿದ್ದರೂ ಜಾತಿಯ ಒಳಗೆ ಆಗಬೇಕು. ಭ್ರಷ್ಟನಿರಲಿ ಅವನು ಜಾತಿಯವನೆಂಬುದು ಮುಖ್ಯ. ದೇಶದ್ರೋಹ ಮಾಡಿದರೂ ಜಾತಿಯವನೆಂದೂ ಸಹಿಸಿಕೊಳ್ಳುತ್ತಾರೆ. ಇದರಿಂದ ಪ್ರಾಮಾಣಿಕರನ್ನು ತಿರಸ್ಕರಿಸುವ ಮನೋಭಾವನೆಯನ್ನು ಜಾತಿಯು ಬೆಳೆಸುತ್ತದೆ.

ಭಾರತೀಯ ಸಮಾಜದ ಪ್ರಗತಿಯು ಸಮಾನತೆಯಲ್ಲಿ ಅಡಗಿದೆ ಎಂದು ಅಂಬೇಡ್ಕರ್ ಬಲವಾಗಿ ನಂಬಿದ್ದರು. ಎಲ್ಲಿಯವರೆಗೆ ಜಾತಿಯ ತಾರತಮ್ಯವಿರುತ್ತದೆಯೋ ಅಲ್ಲಿಯವರೆಗೆ ಸಮಾನತೆ ಸಾಧ್ಯವಿಲ್ಲ. ಸಮಾನತೆಗೆ ಬಹುದೊಡ್ಡ ತೊಡಕು ಈ ಜಾತಿವ್ಯವಸ್ಥೆ. ಇಂತಹ ಜಾತಿವ್ಯವಸ್ಥೆಯನ್ನು ವೇದ, ಪುರಾಣ, ಇತಿಹಾಸಗಳು ಪ್ರಾಚೀನ ಕಾಲದಲ್ಲಿ ಮಾತ್ರವಲ್ಲ ಆಧುನಿಕ ವೈಚಾರಿಕತೆಯ ಸಂದದಲ್ಲಿಯೂ ಗಟ್ಟಿಗೊಳಿಸುತ್ತಿವೆ. ಆದ್ದರಿಂದ ಹಿಂದೂಧರ್ಮ ಸಾರಗ್ರಂಥಗಳಾದ ವೇದ, ಪುರಾಣ, ಸ್ಮೃತಿ, ಬ್ರಾಹ್ಮಣ ಇತಿಹಾಸ ಮೊದಲಾದ ಗ್ರಂಥಗಳು ಇಂದಿನ ಕಾಲಕ್ಕೆ ಹೇಗೆ ಅಪ್ರಸ್ತುತವೆಂಬುದನ್ನು ಜಾತಿ ಮತ್ತು ಧರ್ಮ ಕುರಿತ ಲೇಖನಗಳಲ್ಲಿ ಅತ್ಯಂತ ವೈಜ್ಞಾನಿಕ ತಳಹದಿಯ ಮೇಲೆ ತರ್ಕಿಸಲಾಗಿದೆ.

ಮೂಲತಃ ಮಾನವನು ಜಾತಿವ್ಯವಸ್ಥೆಯನ್ನು ಗಾಢವಾಗಿ ನಂಬುತ್ತಾನೆ. ಆದರೆ ಮನುಷ್ಯನಿಗೆ ಜಾತಿವ್ಯವಸ್ಥೆ ನಿಜವಾಗಿಯೂ ಅನಿವಾರ್ಯವಲ್ಲ ಎಂಬುದು ರಾಜೇಂದ್ರ ಟಿ. ಅವರ ಅಭಿಮತ. ನಾವೆಲ್ಲ ಮನುಷ್ಯರಾಗಿ ಬದುಕಿದಾಗ ಜಾತಿ ಅನಿವಾರ್ಯವಾಗುವುದಿಲ್ಲ. ನಮ್ಮ ನಡೆ-ನುಡಿ, ಆಚಾರ ಪದ್ಧತಿ, ಸಮಾಜ, ಸಂಸ್ಕೃತಿ, ಸಂಪ್ರದಾಯಗಳು ಜಾತಿರಹಿತವಾಗಿ ಪರಿವರ್ತಿಸಿದ್ದರೆ ಪ್ರತಿಯೊಬ್ಬರು ಜಾತಿಯ ಅನಿವಾರ್ಯತೆಯಿಂದ ಹೊರಬರುವ ಮನಸ್ಸು ಮಾಡಲು ಸಾಧ್ಯ. ಜಾತಿಯ ಪರಿಕಲ್ಪನೆಯೇ ಇಲ್ಲದಿದ್ದರೆ ಒಂದು ಜಾತಿಯಿಂದ ಇನ್ನೊಂದು ಜಾತಿಗೆ ಹೋಗುವ ಪ್ರಶ್ನೆಯೇ ಬರುವುದಿಲ್ಲ.

ISSN PRINT 2319 1775 Online 2320 7876
Research paper © 2012 IJFANS. All Rights Reserved, UGC CARE Listed ( Group -I) Journal Volume 10, Iss 1, 2021

‘ಹಿಂದುತ್ವ’ ಬ್ರಾಹ್ಮಣರ ಸೃಷ್ಟಿಯೂ ಅಲ್ಲ. ಹಾಗೆಯೇ ವೈದಿಕ ಸೃಷ್ಟಿ ಮೊದಲೇ ಅಲ್ಲ. ಪುರೋಹಿತರ ಸೃಷ್ಟಿಯಂತೂ ಅಲ್ಲವೇ ಅಲ್ಲ. ರಾಜಕೀಯ-ಆರ್ಥಿಕ ವೈರುಯಗಳನ್ನು ದುರುಪಯೋಗ ಮಾಡಿಕೊಳ್ಳುವ ಮೂಲಕ ಭಾವನಾತ್ಮಕ ವಿಷಯವನ್ನು ‘ಸಮಸ್ಯೆ’ ಎಂದು ಸಾರುವ, ಪ್ರಚಾರ ಮಾಡುವ ತಂತ್ರ ಇದು. ಸಾಮ್ರಾಜ್ಯಶಾಹಿ, ಬಹುರಾಷ್ಟ್ರೀಯ ಕಂಪೆನಿಗಳು, ಎನ್‌ಜಿಓಗಳು ಆಳುವ ವರ್ಗಗಳು, ವಿಶಾಲವಾದ ಶೋಷಿತ ಜನಸಮುದಾಯಗಳು ಇವುಗಳ ನಿರಂತರ ಘರ್ಷಣೆ ಮತ್ತು ವೈರುಧ್ಯಗಳ ಫಲವಾಗಿ ‘ಹಿಂದುತ್ವ’ ಶೋಷಕರ ಪಾಲಿನ ತಂತ್ರವಾಗಿ, ಕುತಂತ್ರವಾಗಿ, ವಿಧಾನವಾಗಿ, ಅಡ್ಡದಾರಿಯಾಗಿ, ಕೆಲವೊಮ್ಮೆ ರಾಜಮಾರ್ಗವಾಗಿ ಮೈದಳೆದು ನಿಂತಿದೆ. ರಾಜಕೀಯ-ಆರ್ಥಿಕ ಸಮಸ್ಯೆಗಳು ಬಗೆಹರಿಯದ ಹೊರತು ‘ಹಿಂದುತ್ವ’ ನಾಶವಾಗುವುದಿಲ್ಲ.(ಬಿ.ಎಂ. ಪುಟ್ಟಯ್ಯ,) ಕ್ರಾಂತಿಕಾರಿ ರಾಜಕೀಯ ಚಿಂತನೆಯ ತಾತ್ಕಾಲಿಕ ಹಿನ್ನಡೆ ಮತ್ತು ಕ್ರಾಂತಿಕಾರಿ ರಾಜಕೀಯ ಪಕ್ಷದ ಗೈರುಹಾಜರಿಯಲ್ಲಿ ಹಿಂದುತ್ವ ಇಂದು ತಲೆ ಎತ್ತಿ ನಿಂತಿದೆ. ‘ಹಿಂದುತ್ವ’ದ ನಾಶಕ್ಕಾಗಿ ಪ್ರಜಾತಾಂತ್ರಿಕ ಕ್ರಾಂತಿಕಾರಿ ಮಾರ್ಗ ಒಂದೇ ಉಳಿದಿರುವ ದಾರಿಯಾಗಿದೆ

**ಜಾತಿ ಮತ್ತು ಮತಾಂತರ ಕುರಿತು,**

‘ಮತಾಂತರ’ವು ಒಂದು ಸಾಮಾಜಿಕ ಕ್ರಿಯೆ. ಒಂದು ಧರ್ಮದಿಂದ ಮತ್ತೊಂದು ಧರ್ಮಕ್ಕೆ ಪ್ರವೇಶ ಪಡೆಯುವ ಸಾಮಾಜಿಕ ಚಲನಶೀಲತೆ. ಒಂದು ಧರ್ಮದಿಂದ ಮತ್ತೊಂದು ಧರ್ಮಕ್ಕೆ ಯಾಕೆ ಸೇರಬೇಕು ಎಂಬುದು ಬಹಳ ಮುಖ್ಯವಾದ ಪ್ರಶ್ನೆ. ಇದಕ್ಕೆ ನಾವು ಈ ಮುಂದಿನಂತೆ ವಿವರಣೆ ಕೊಡಬೇಕಾಗುತ್ತದೆ. ಭಾರತವು ‘ಜಾತಿ ಅಸಮಾನತೆ’ಯಿಂದ ಕೂಡಿದೆ. ಭಾರತದಲ್ಲಿ ಅಸ್ಪೃಶ್ಯತೆಯನ್ನು ಆಚರಿಸಲಾಗುತ್ತಿದೆ. ಅಸ್ಪೃಶ್ಯರನ್ನು ಭಾರತದಲ್ಲಿ ಅತ್ಯಂತ ಅಮಾನವೀಯವಾಗಿ, ಪಶು ಪ್ರಾಣಿಗಳಿಗಿಂತಲೂ ಕಡೆಯಾಗಿ ನಡೆಸಿಕೊಳ ್ಳಲಾಗುತ್ತಿದೆ. ಅಸ್ಪೃಶ್ಯರನ್ನು ಅತ್ಯಂತ ಹೀನಾಯವಾಗಿ, ಅಪಮಾನದಿಂದ ನಡೆಸಿಕೊಳ್ಳಲಾಗುತ್ತಿದೆ. ಮದುವೆ ಮತ್ತು ಆಹಾರದ ವಿಷಯದಲ್ಲಿ ಇದು ಈಗಲೂ ಜಾರಿಯಲ್ಲಿದೆ. ಅವರನ್ನು ಕನಿಷ್ಠ ಮಾನವೀಯ ಘನತೆಯಿಂದ ಕಾಣುತ್ತಿಲ್ಲ. ಅವರನ್ನು ನಿರಂತರವಾಗಿ ಅಪಮಾನದಲ್ಲಿ, ಅವಮಾನದಲ್ಲಿ ಇಡಲಾಗಿದೆ. ಅವರ ಪ್ರತಿಭೆಗಳನ್ನು, ಸಾಮರ್ಥ್ಯಗಳನ್ನು ದಮನ ಮಾಡಲಾಗಿದೆ. ಅವರಿಗೆ ಸಮಾಜದಲ್ಲಿ ಸಹಜವಾಗಿ ಸಿಗಬೇಕಿರುವ ಅವಕಾಶಗಳನ್ನು ಅವರಿಂದ ಕಿತ್ತುಕೊಳ್ಳಲಾಗಿದೆ. ಅವರನ್ನು ಸಮಾಜದ ಅತ್ಯಂತ ಹೇಯವಾದ ಕೆಲಸಗಳಿಗೆ ಬಳಸಿಕೊಳ್ಳಲಾಗುತ್ತಿದೆ. ಸಮಾಜದಲ್ಲಿ ಯಾವುದೇ ಮನುಷ್ಯರು ಕನಿಷ್ಠ ಘನತೆಯಿಂದ ಬದುಕಲು, ಬಾಳಲು ಬಯಸುತ್ತಾರೆ. ಹೊಟ್ಟೆಗಿಲ್ಲದ ಬಿಕ್ಷಕರು ಭಿಕ್ಷೆ ಕೇಳಲು ಬಂದಾಗ, ಅವರಿಗೆ ಏನನ್ನಾದರೂ ಕೊಟ್ಟರೆ

ISSN PRINT 2319 1775 Online 2320 7876

Research paper © 2012 IJFANS. All Rights Reserved, UGC CARE Listed ( Group -I) Journal Volume 10, Iss 1, 2021

ತೆಗೆದುಕೊಳ್ಳುತ್ತಾರೆ. ಕೊಡುವ ಬದಲು ಅವರ ಮುಂದೆ ಅವರಿಗೆ ಕೊಡಬೇಕಾಗಿರುವ ವಸ್ತು ಪದಾರ್ಥವನ್ನು ಎಸೆದರೆ ಅವರು ತೆಗೆದುಕೊಳ್ಳುವುದಿಲ್ಲ. ಅಂದರೆ ಅವರಲ್ಲಿ ಹಸಿವನ್ನು ಮೀರಿದ ಸ್ವಾಭಿಮಾನ ಗಟ್ಟಿಯಾಗಿರುತ್ತದೆ. ಈ ದೃಷ್ಟಿಯಿಂದ ಅಸ್ಪೃಶ್ಯತೆಯನ್ನು ಪರಿಶೀಲನೆ ಮಾಡಿದರೆ, ಭಾರತದಲ್ಲಿ ಅಸ್ಪೃಶ್ಯರ ಕನಿಷ್ಠ ಘನತೆಯನ್ನು ಮತ್ತು ಸ್ವಾಭಿಮಾನವನ್ನು ದಮನ ಮಾಡಲಾಗಿದೆ, ಕಿತ್ತುಕೊಳ್ಳಲಾಗಿದೆ. ಹಾಗಾಗಿಯೇ ಭಾರತದಲ್ಲಿ ಅಥವಾ ಕರ್ನಾಟಕದಲ್ಲಿ ಯಾವ ಜಾತಿಯಲ್ಲಿ ಇದ್ದರೆ ಸಮಾಜವು ಅಪಮಾನ ಮಾಡುತ್ತದೋ, ಸಮಾಜವು ಅತ್ಯಂತ ಕನಿಷ್ಠವಾಗಿ ಕಾಣುತ್ತದೆಯೋ, ಸ್ವಾಭಿಮಾನವನ್ನು ದಮನ ಮಾಡುತ್ತದೋ ಅಂತಹ ಜಾತಿಯಲ್ಲಿ ಮುಂದುವರಿಯಲು ಇಷ ್ಟಪಡುವುದಿಲ್ಲ. ಭಾರತದಲ್ಲಿ ಜಾತಿ ಶೋಷಣೆ ಮತ್ತು ಜಾತಿಯ ಅಪಮಾನ ಹಾಗೂ ಅಸ್ಪೃಶ್ಯತೆಗಳು ಹಿಂದೂಧರ್ಮದ ಭದ್ರವಾದ ಹಿಡಿತದಲ್ಲಿ ಇವೆ. ಈ ಕಾರಣದಿಂದ ಭಾರತದಲ್ಲಿ ಹಿಂದೂಧರ್ಮದಿಂದ ಮತ್ತೊಂದು ಧರ್ಮಕ್ಕೆ ಒಂದು ಜಾತಿಯಿಂದ ಮತ್ತೊಂದು ಜಾತಿಗೆ ಮತಾಂತರ ಹೊಂದುತ್ತಾರೆ. ಇದು ಜಾತಿ ಅಸಮಾನತೆಯ ವಿರೋಧಿ ಹೋರಾಟವೂ ಹೌದು; ಜೊತೆಗೆ ಸ್ವಾಭಿಮಾನದ ಚಳುವಳಿಯೂ ಹೌದು.

ಮತಾಂತರವು ಎಲ್ಲ ಕಾಲಕ್ಕೂ ಅಭಿವ್ಯಕ್ತಿಗೊಳ್ಳುವ ಮತ್ತು ಚರ್ಚೆಗೊಳಗಾಗುತ್ತಿರುವ ವಿಷಯವಾಗಿದೆ. ಮತಾಂತರಕ್ಕೆ ಧಾರ್ಮಿಕ, ಮತೀಯ, ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಕೌಟುಂಬಿಕ ಆಯಾಮಗಳಿವೆ. ಕನ್ನಡದ ಪ್ರಾಚೀನ ಕಾವ್ಯಗಳಲ್ಲೇ ಮತಾಂತರದ ಸ್ವರೂಪಗಳನ್ನು ಗುರುತಿಸಬಹುದು. ಕವಿರಾಜಮಾರ್ಗದಲ್ಲಿ ಜೈನಧರ್ಮ ಪ್ರಚಾರದ ಆಶಯಗಳಿವೆ, ವಡ್ಡಾರಾಧನೆ ಮತಾಂತರದ ನೆಲೆಗಳನ್ನೊಳಗೊಂಡಿದೆ. ಬಸವಣ್ಣನ ಲಿಂಗದೀಕ್ಷೆಯ ಪರಿಕಲ್ಪನೆಯಲ್ಲಿ ಮತಾಂತರದ ಹೊಳಹುಗಳಿವೆ. ಕನ್ನಡ ಸಾಹಿತ್ಯದಲ್ಲಿ ಮತಾಂತರದ ವಿಚಾರವು ವಿಸ್ತಾರ ಮತ್ತು ಗಂಭೀರವಾಗಿದೆ.

**ಜಾತಿ ಮತ್ತು ಅಂತರ್ಜಾತಿ ವಿವಾಹ ಕುರಿತು**

ಮನುಷ್ಯ ಸಹಜವಾಗಿಯೇ ಪ್ರಾಣಿಲೋಕದಿಂದ ಭಿನ್ನವಾಗಿ ವಿಕಾಸಗೊಳ್ಳುತ್ತಾ ಬಂದಿದ್ದಾನೆ. ಅವನ ಈ ಹಾದಿಯಲ್ಲಿ ಅನೇಕ ಒಳಿತು ಕೆಡುಕುಗಳ ಪರಂಪರೆಯೇ ಸೃಷ್ಟಿಗೊಂಡಿದೆ. ಸಮಷ್ಟಿ ರೂಪದಲ್ಲಿ ನೆಲೆಗೊಂಡ ಮಾನವನ ಈ ಮಹಾನ್ ಯಾತ್ರೆಯಲ್ಲಿ ಮದುವೆ ಕುಟುಂಬ, ಬದುಕಿನ ಕ್ರಮ, ಕುಲ, ಧರ್ಮ, ಜಾತಿ, ದೇವರು, ಕಟ್ಟು ಕಟ್ಟಲೆ, ನಂಬಿಕೆ ಮೊದಲಾದ ಅನೇಕ ಸಂಗತಿಗಳು ಒಟ್ಟೊಟ್ಟಿಗೆ ರೂಪುಗೊಳ್ಳುತ್ತಾ

ISSN PRINT 2319 1775 Online 2320 7876
*Research paper* **© 2012 IJFANS. All Rights Reserved,** **UGC CARE Listed ( Group -I) Journal Volume 10, Iss 1, 2021**

ಬೆಳೆದಿವೆ. ಕೌಟುಂಬಿಕ ಬದುಕಿನ ರೂಪಗಳು ಸೃಷ್ಟಿಗೊಂಡ ಬೆನ್ನಲ್ಲೆ ಸ್ತ್ರಿ-ಪುರುಷರ ಸಾಮೀಪ್ಯ ಜೀವನ ಸಾಮಾಜಿಕ ಚೌಕಟ್ಟನ್ನು ಪಡೆಯಿತು. ಇದರ ಪ್ರಕಟಿತ ಸಾಂಸ್ಥಿಕ ಬದುಕೇ 'ವಿವಾಹ'ದ ವ್ಯವಸ್ಥೆಯಾಗಿ ಬೆಳೆದಿದೆ. ಹೀಗಾಗಿ ವಿವಾಹವು ಮಾನವ ಬದುಕಿನ ಅತ್ಯಂತ ಪ್ರಮುಖವಾದ ಘಟ್ಟ. ಕುಟುಂಬ ವ್ಯವಸ್ಥೆಯ ಬುನಾದಿಯಾಗಿರುವ ವಿವಾಹ ಬಹುಮುಖ್ಯವಾದ ಸಾಮಾಜಿಕ ಸಂಸ್ಥೆಯಾಗಿದ್ದು, ಜಗತ್ತಿನ ಎಲ್ಲ ಜಾತಿ, ಜನಾಂಗದ ಜನರ ಬದುಕಿನಲ್ಲಿ ಮಹತ್ವದ ಸ್ಥಾನವನ್ನು ಪಡೆದಿದೆ. ಪ್ರತಿಯೊಂದು ಸಮಾಜವೂ ವಿವಾಹಕ್ಕೆ ವಿಶೇಷವಾದ ಅರ್ಥ ಮತ್ತು ಗೌರವದ ಸ್ಥಾನ ಮಾನ ನೀಡಿದೆ. ಪ್ರಾಚೀನ ಕಾಲದಿಂದಲೂ ವಿಭಿನ್ನವಾದ ವೈವಾಹಿಕ ಪದ್ಧತಿಗಳನ್ನು ಭಾರತೀಯ ಸಮಾಜ ಹೊಂದಿದ್ದು, ಆಧುನಿಕ ಕಾಲದಲ್ಲಿ ಕಾನೂನುಬದ್ಧವಾದ ಮಾನ್ಯತೆಯನ್ನು ವಿವಾಹದ ವ್ಯವಸ್ಥೆ ಪಡೆದಿದೆ.

ಸಾಂಪ್ರದಾಯಿಕ ವಿವಾಹಕ್ರಮವನ್ನು ಭೇದಿಸುವ ರೂಪದಲ್ಲಿ ಆರಂಭಗೊಂಡ ಅಂತರ್ಜಾತೀಯ ಮತ್ತು ಅಂತರ್‌ಧರ್ಮೀಯ ವಿವಾಹಗಳು ಅನೇಕ ಕಾರಣಗಳಿಂದಾಗಿ ಮಹತ್ವ ಪಡೆದಿದೆ. ಏಕೆಂದರೆ ವರ್ಣವ್ಯವಸ್ಥೆ ಜಾತಿವ್ಯವಸ್ಥೆಯಾಗಿ ಬದಲಾದ್ದರಿಂದ, ಹುಟ್ಟಿನಿಂದ ಮೇಲು ಕೀಳುಗಳ ತಾರತಮ್ಯವು ಸೃಷ್ಟಿಗೊಂಡ ಪರಿಣಾಮ ಜಾತಿಯು ಬದುಕಿನ ಸಾಮಾಜಿಕ ಅಂತಸ ್ತನ್ನು ನಿರ್ಧರಿಸುವ ಅಪಾಯಕಾರಿ ಸಂಗತಿಯಾಗಿ ಬೆಳೆದಿದೆ. ಜಾತಿಯ ಬೇರುಗಳನ್ನು ಕೀಳುವ ಪ್ರಯತ್ನವು ಬುದ್ಧ, ಬಸವಾದಿಗಳ ಕಾಲದಿಂದ ನಡೆದರೂ ಸಹ, ಅದು ತನ್ನ ಸ್ವರೂಪವನ್ನು ಮತ್ತಷ್ಟು ವಿಸ್ತರಿಸಿಕೊಂಡು ಆಧುನಿಕ ಕಾಲದಲ್ಲಿ ಪರಾಕಾಷ್ಠತೆಗೆ ತಲುಪಿದೆ. ಸಮಾನತೆಯ ಹಾದಿಗೆ ಅಡ್ಡಿಯಾಗಿರುವ ಜಾತಿವ್ಯವಸ್ಥೆಯ ನಿರ್ಮೂಲನೆಗೆ ಹಲವು ದಾರಿಗಳನ್ನು ನಾವು ಕಂಡುಕೊಂಡಿದ್ದು, ಆ ದಿಕ್ಕಿನಲ್ಲಿ ಅಂತರ್ಜಾತಿ ವಿವಾಹವೂ ಸಹ ಒಂದು ಪ್ರಗತಿಪರ ಆಶಯದ ದಾರಿ ಎಂಬುದು ಮುಖ್ಯವಾದ ಸಂಗತಿ. ಈ ರೀತಿಯ ವಿವಾಹವು ಸಾಮಾಜಿಕ ವಿನ್ಯಾಸದ ಕರಮವನ್ನು ವ್ಯತ್ಯಸ್ಥಗೊಳಿಸುವುದರೊಂದಿಗೆ ಬದುಕಿನ ಸಾಂಸ್ಕೃತಿಕ ಚಲನೆಗೆ, ಸಂಘರ್ಷಕ್ಕೆ, ಸಾಮರಸ್ಯಕ್ಕೆ ಹಾಗೆಯೇ ಕೆಲವೊಮ್ಮೆ ವಿನಾಶಕ್ಕೂ ಕಾರಣವಾಗಿರುವುದು ವಾಸ್ತವಾಂಶ. ಅಂತರ್ಜಾತಿ-ಧರ್ಮೀಯ ವಿವಾಹಗಳು ವರ್ತಮಾನದ ಬದುಕಿನಲ್ಲಿ ದೊಡ್ಡಮಟ್ಟದ ಆತಂಕವನ್ನೇನೂ ಸೃಷ್ಟಿಸದೇ, ಸಹಜವಾದ ವೈವಾಹಿಕ ಚಲನೆಯಾಗಿ ಕಂಡರೂ ಕೆಲವೇ ವರ್ಷಗಳ ಹಿಂದೆ ಈ ರೀತಿಯ ವಿವಾಹಗಳು ಸಾಮಾಜಿಕ ಬದುಕಿನಲ್ಲಿ ಗಂಭೀರವಾದ ಪರಿಣಾಮವನ್ನು ಬೀರಿದ್ದವು ಎಂಬುದನ್ನು ಮರೆಯುವಂತಿಲ್ಲ. ಏಕೆಂದರೆ ಭಾರತೀಯ ಸಮಾಜದಲ್ಲಿ ಮದುವೆ ಎನ್ನುವುದು ಕೇವಲ ಗಂಡು ಮತ್ತು ಹೆಣ್ಣಿನ ವೈಯಕ್ತಿಕ ಸಂಬಂಧವಾಗಿ ಮಾತ್ರ ಉಳಿಯದೇ ಬದುಕೊಂದರ ಸಾಂಸ್ಕೃತಿಕ ನೆಲೆಗಟ್ಟನ್ನು ಅದು

ISSN PRINT 2319 1775 Online 2320 7876

*Research paper* **© 2012 IJFANS. All Rights Reserved, UGC CARE Listed ( Group -I) Journal Volume 10, Iss 1, 2021**

ಪಡೆದುಕೊಳ್ಳುವುದರಿಂದ ವಿವಾಹದ ವ್ಯಾಖ್ಯಾನ ಸಹಜವಾಗಿಯೇ ಹಲವು ರೂಪಗಳನ್ನು ಪಡೆದುಕೊಂಡು ಬಿಡುತ್ತದೆ.

ಒಟ್ಟಾರೆ ಅಂತರ್ಜಾತಿ-ಅಂತರ್‌ಧರ್ಮೀಯ ವಿವಾಹವು ಸಾಮಾಜಿಕವಾದ ಮಾನವೀಯ ತಲ್ಲಣಗಳನ್ನು ಹುಟ್ಟುಹಾಕುವ ಚಿಕಿತ್ಸೆಯಾಗಿದೆ. ಹಾಗಾಗಿಯೇ ಕನ್ನಡ ವೈಚಾರಿಕ ಸಾಹಿತ್ಯ ಲೋಕದಲ್ಲಿ ಇದೊಂದು ಆಳವಾದ ಅಧ್ಯಯನಕ್ಕೆ ಯೋಗ್ಯವಾದ ವಿಷಯವಾಗಿದೆ. ಆ ಮೂಲಕ ಕಳೆದ ಶತಮಾನದ ಸಾಮಾಜಿಕ, ಸಾಂಸ್ಕೃತಿಕ ಬದುಕಿನ ತುಮುಲಗಳ ತಿರುಳನ್ನು ಕಟ್ಟಿಕೊಡುವ ಪ್ರಯತ್ನವಾಗಿದ್ದು, ತನ್ಮೂಲಕ ಈ ಅಧ್ಯಯನ ಭಾಗ ಸೀಮಿತ ವ್ಯಾಪ್ತಿಯಲ್ಲಿಯೇ ತನ್ನದೇ ಆದ ಮಹತ್ವ ಹಾಗೂ ಪ್ರಸ್ತುತತೆಯನ್ನು ಹೊಂದಿದೆ. ವೈಚಾರಿಕ ಲೇಖನಗಳನ್ನು ಒಂದೆಡೆ ಸೇರಿಸಿ ಅವುಗಳು ಅಂತರ್ಜಾತಿ-ಅಂತರ್‌ಧರ್ಮೀಯ ವಿವಾಹದಂತಹ ಸಾಮಾಜಿಕ ಚಲನೆಯನ್ನು ಕಂಡುಕೊಂಡಿರುವ ಬಗೆ ಹಾಗೂ ಆ ಕುರಿತು ಪ್ರತಿಕ್ರಿಯಿಸಿರುವುದನ್ನು ಗುರುತಿಸುವ ಈ ಭಾಗವು ಕೇವಲ ವಿವಾಹದ ಪರಿವರ್ತನೆಯನ್ನು ಮಾತ್ರ ತಿಳಿಸುವುದಲ್ಲದೇ, ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಬದುಕು ವಿಕಾಸಗೊಳ್ಳುತ್ತಿರುವ ಪರಿಯನ್ನು ಕಲಾತ್ಮಕ ನೆಲೆಯಲ್ಲಿ ಗ್ರಹಿಸಿರುವ ವಿಶಿಷ್ಟ ಅಧ್ಯಯನ ಕೂಡ ಆಗಿದೆ ಎಂಬುದು ನನ್ನ ವಿನಮ್ರ ತಿಳುವಳಿಕೆಯಾಗಿದೆ.

**ಉಪಸಂಹಾರ**

ವೈಚಾರಿಕತೆ ಎಂಬುದು ವಾಸ್ತವವಾದಿ ಚಿಂತನೆಯ ಫಲಶ್ರುತಿ. ವಿಚಾರವಂತಿಕೆಯೇ ವೈಚಾರಿಕನಿಗಿರಬೇಕಾದ ಅರ್ಹತೆ. ಇನ್ನಿತರೆ ದೃಷ್ಟಿಕೋನಗಳನ್ನು ತಾವು ಆಲೋಚಿಸಿದಂತೆ ಚಿಂತಕರು ತಮ್ಮ ಅಭಿಪ್ರಾಯವನ್ನು ಸಂದರ್ಭೋಚಿತವಾಗಿ ದಾಖಲಿಸುತ್ತ ಬಂದಿದ್ದಾರೆ. ಜಾತಿ ಪರಿಣಾಮದ ಹಿನ್ನೆಲೆಯಲ್ಲಿ ಅಂದಿನ ಸಾಂದರ್ಭಿಕ ಒತ್ತಡ, ಅನಿವಾರ್ಯತೆ, ನೋವು, ಅವಮಾನ, ಪರಂಪರೆಯ ಅರಿವುಗಳ ಆಳವನ್ನು ಓದುಗರು ಗಮನಿಸಬಹುದು. ಅದಕ್ಕೆ ವ್ಯವಸ್ಥೆಯು ಕಟುವಾಗಿ ಪ್ರತಿಕ್ರಿಯಿಸಿದ ರೀತಿಯನ್ನು, ಅದನ್ನು ಮೀರಿ ನಿಂತ ಕೆಳಜಾತಿ ಜನಾಂಗವು ತಮ್ಮ ಅಸ್ತಿತ್ವ ಸ್ಥಾಪಿಸಿಕೊಂಡು ಬಂದ ಬಗೆಯನ್ನು ಗಮನಿಸಬೇಕಾದ ವಿಷಯ. ಧರ್ಮ-ಧರ್ಮಗಳ ನಡುವಿನ ಸಂಘರ್ಷ ಹಾಗೂ ಧರ್ಮ ಮತ್ತು ಜಾತಿ ಸಂಬಂಧ ವಿಷಯವು ಕೂಡ ಗಂಭೀರವಾದದ್ದು. ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಆಗುತ್ತಿರುವ ಹಲ್ಲೆಯನ್ನು ನಿಲ್ಲಿಸುವುದರ ಜೊತೆಗೆ ಕ್ರಿಮಿನಲ್ ಹಿನ್ನೆಲೆಯುಳ್ಳ ಸಂಘಟನೆಗಳನ್ನು ಸರಕಾರಗಳು ನಿಷೇಧಿಸಬೇಕೆಂಬ ಒತ್ತಾಯ ಎಲ್ಲೆಡೆ ಕಾಣುತ್ತದೆ. ಹೀಗೆ ಮತೀಯ ರಾಜಕೀಯ ಶಕ್ತಿಗಳ ಪ್ರಾಬಲ್ಯ, ಅಟ್ಟಹಾಸ ಹಾಗೂ ಸೆಂಟ್ರಿಸ್ಟ್ ಸರಕಾರಗಳ ಅವಕಾಶವಾದಿ ಹೊಂದಾಣಿಕೆಗಳನ್ನು ವಿವರಿಸುತ್ತಲೇ ಇದರಿಂದ ಉಂಟಾದ ಸಾಮಾನ್ಯರ

ಅಸಹಾಯಕತೆಯನ್ನು ಗಮನಿಸಲಾಗಿದೆ. ಧರ್ಮ ಹಾಗೂ ರಾಜಕಾರಣ ಕುರಿತಾದ ಬಹುಪಾಲು ಬೌದ್ಧಿಕ ಚರ್ಚೆಗಳು ಜಾತಿ ಮತ್ತು ಧರ್ಮವನ್ನು ಕುರಿತಾದ ಪ್ರಚಲಿತ ಸಮಾಜಶಾಸ್ತ್ರಿಯ ವಿವರಣೆಯನ್ನು ಒಪ್ಪಿ, ಅದರ ಆಧಾರದ ಮೇಲೆ ರಾಜಕಾರಣವನ್ನು ವೈಚಾರಿಕವಾಗಿ ಕುರಿತು ಚರ್ಚಿಸಲಾಗಿದೆ

ಸಾಹಿತ್ಯ ಕೇವಲ ಜೀವನದ ಪ್ರತಿಬಿಂಬ, ಗತಿಬಿಂಬವಲ್ಲದೇ ಅದು ಪ್ರಗತಿಬಿಂಬವೂ ಆಗುತತದೆ ಎಂಬುದು ಒಟ್ಟಾರೆ ಈ ಭಾಗದ ಆಶಯ. ಹೀಗಾಗಿ ಪ್ರಸ್ತುತ ಅಧ್ಯಯನವು ತನ್ನ ಮಿತಿಯಲ್ಲಿ ಆದಷ್ಟೂ ಕೃತಿನಿಷ್ಠ ಮತ್ತು ವಸ್ತುನಿಷ್ಠತೆಯಿಂದ ಕೂಡಿ ಪ್ರಾಮಾಣಿಕವಾಗಿ ನಡೆದಿದೆ ಎಂಬುದು ಈ ಸಂಶೋಧನೆಯ ತಿಳುವಳಿಕೆ. ಇಷ್ಟಾದರೂ ಅನೇಕ ಅನಿವಾರ್ಯ ಕಾರಣಗಳಿಂದಾಗಿ ಪ್ರಬಂಧದ ವ್ಯಾಪ್ತಿಯೊಳಗೆ ಪ್ರವೇಶಿಸದಿರುವ ಇನ್ನೂ ಹಲವು ಲೇಖನಗಳೂ ಇವೆ ಎಂಬ ಅರಿವು ನನ್ನಲ್ಲಿದೆ. ಸಂಶೋಧನೋತ್ತರ ಅಧ್ಯಯನದಲ್ಲಿ ಅವುಗಳನ್ನೂ ಸಹ ಸ್ವೀಕರಿಸುವ ಮನೋಭಾವನೆಯೊಂದಿಗೆ, ಮಹಾಪ್ರಬಂಧವನ್ನು ಈ ಕುರಿತ ಚರ್ಚೆಯ ಮೊದಲ ಮೆಟ್ಟಿಲು ಹಾಗೂ ಒಂದಿಷ್ಟು ವಿಚಾರಗಳ ಮಂಥನ ಎಂದೇ ನಾನು ಭಾವಿಸಿದ್ದೇನೆ. ಏಕೆಂದರೆ ಸಾಹಿತ್ಯ ಕೃತಿಗೂ ಮತ್ತು ಬದುಕಿನ ವಾಸ್ತವತೆಗೂ ಸಾಕಷ್ಟು ಅಂತರವಿದ್ದೇ ಇರುತ್ತದೆಯಾದ್ದರಿಂದ ವಿಜಾತೀಯ-ಮತೀಯ ವಿವಾಹವನ್ನು ಪರಿಭಾವಿಸಿರುವ ಲೇಖನಗಳ ಮಿತಿಯ ಅರಿವೂ ಸಹ ಆಗಿದೆ.

## ಪರಮಾರ್ಶನಗ್ರಂಥಗಳು


1. ಅಗ್ರಹಾರ ಕೃಷ್ಣಮೂರ್ತಿ(ಸಂ), ಸಂಸ್ಕೃತಿ ಕಥನ., ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೨೦೦೬
2. ಢಂಕಿನ್ ಝಳಕಿ(ಸಂ), ಭಾರತದಲ್ಲಿ ಜಾತಿವ್ಯವಸ್ಥೆ ಇದೆಯೆ?, ಆನಂದಕಂದ ಗ್ರಂಥಮಾಲೆ, ೨೦೧೨
3. ಡೊಮಿನಿಕ್ ಡಿ., ಧರ್ಮ, ಆಧುನಿಕತೆ ಮತ್ತು ಸಾಂಸ್ಕೃತಿಕ ರಾಜಕಾರಣ., ಸಂಚಲನ ಪ್ರಕಾಶನ, ಬೆಂಗಳೂರು, ೨೦೧೨
4. ದಂಡಪ್ಪ ಎಚ್(ಸಂ), ಜಾಗತಿಕ ವಿಚಾರ ಸಾಹಿತ್ಯ, ಕುವೆಂಪು ಭಾಷಾ ಪ್ರಾಧಿಕಾರ, ಬೆಂಗಳೂರು, ೨೦೧೭
5. ಮುನಿವೆಂಕಟಪ್ಪ ವಿ., 'ದಲಿತ ಚಳವಳಿ ಚರಿತ್ರೆ', ತನುಮನು ಪ್ರಕಾಶನ, ೨೦೦೯
6. ಸಣ್ಣರಾಮ, ಡಾ.ಅಂಬೇಡ್ಕರ್ ಮತ್ತು ಮೀಸಲಾತಿ, ಪ್ರೀತಂ ಪ್ರಕಾಶನ, ಶಿವಮೊಗ್ಗ, ೨೦೦೮.

7. ಸಿದ್ಧಲಿಂಗಯ್ಯ, 'ಅಸ್ಪೃಶ್ಯತೆ ಮತ್ತು ಸಮಾಜದ ಹೊಣೆಗಾರಿಕೆ', ಹಕ್ಕಿನೋಟ, ಕಲ್ಯಾಣಿ ಪ ್ರಕಾಶನ, ೧೯೯೦
8. ಪೂರ್ಣಚಂದ್ರ ತೇಜಸ್ವಿ ಕೆ.ಪಿ., 'ಜಾತಿಪದ್ಧತಿ ಮತ್ತು ಕಲಾಭಿವ್ಯಕ್ತಿ', ವಿಮರ್ಶೆಯ ವಿಮರ್ಶೆ, ಪುಸ್ತಕ ಪ್ರಕಾಶನ, ೨೦೦೯.
9. ಯಡೂರ ಮಹಾಬಲ, 'ಭಾರತದ ಜಾತಿ ಸಮಸ್ಯೆ', ಲೋಹಿಯಾ ವಿಚಾರಗಳ ಒಂದು ವಿಮರ್ಶೆ, ಚಿಂತನ ಚಿಲುಮೆ ಪ್ರಕಾಶನ, ಬೆಂಗಳೂರು, ೨೦೧೭
10. ಹಿರೇಮಗಳೂರು ಕಣ್ಣನ್, 'ಮತ' ಎಂದರೆ ಅಭಿಪ್ರಾಯ 'ಜಾತಿ' ಎಂದರೆ ನಡೆಯುವುದು, ನುಡಿ ಪೂಜೆ(ಲೇಖನಗಳು), ಅಂಕಿತ ಪುಸ್ತಕ, ೨೦೦೮